
# ಮಾತು ಮುತ್ತು, ಮಾತೇ ಮುತ್ತು!

**ಮಕ್ಕಳಾಡುವ ಮಾತು ಮನಸ್ಸುಗಳನ್ನು ಅರಳಿಸುವಂತಿರಬೇಕು. ಅಂಥ ಮಾತುಗಳ ಪಾಠ ಪೋಷಕರಿಂದಲೇ ಮಕ್ಕಳಿಗೆ ದೊರೆಯಬೇಕು.**

■ ಸ್ವಯಂಪ್ರಭಾ



'ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು' ಎನ್ನುವ ಮಾತಿದೆ. ಈ ಮಾತು ಮಕ್ಕಳು ಲೋಕಜ್ಞಾನ ಅರಿಯುವ ನಿಟ್ಟಿನಲ್ಲಿ ಮಾತ್ರವಲ್ಲ, ಒಳ್ಳೆಯ ನಡವಳಿಕೆ ರೂಪಿಸಿಕೊಳ್ಳುವ ನಿಟ್ಟಿನಲ್ಲೂ ಮುಖ್ಯವಾದುದು. ಮಕ್ಕಳು ಆಡುವ ಮಾತಿನ ಹಿನ್ನೆಲೆಯಲ್ಲಿ ಮನೆಯಲ್ಲಿ ಅವರಿಗೆ ದೊರೆತಿರುವ ನೈತಿಕ ಶಿಕ್ಷಣ ಯಾವ ಬಗೆಯದೆನ್ನುವುದನ್ನು ಅಂದಾಜು ಮಾಡಬಹುದು.

ಮಾತು ಮತ್ತು ದೈಹಿಕ ಭಾಷೆ ಮಕ್ಕಳಿಗೆ ರೂಢಿಗತವಾಗುವುದು ಮನೆಯ ಪರಿಸರದಲ್ಲಿಯೇ. ಆಡುವ ಮಾತು ಹೇಗಿರಬೇಕು ಎನ್ನುವುದನ್ನು ಮಕ್ಕಳಿಗೆ ಹೇಳಿಕೊಡುತ್ತೇವೆ, ನಿಜ. ಆದರೆ, ಹೇಳಿಕೊಟ್ಟದ್ದನ್ನು ಕಲಿಯುವುದಕ್ಕಿಂತಲೂ ಹೆಚ್ಚಾಗಿ ಮನೆಯ ಪರಿಸರದಲ್ಲಿ ಆಡಲಾಗುವ ಮಾತುಗಳನ್ನು ಕೇಳಿಯೇ ಮಕ್ಕಳು ಹೆಚ್ಚು ಕಲಿಯುತ್ತಾರೆ. ಅಂದರೆ, ಅಪ್ಪ–ಅಮ್ಮ, ಅಜ್ಜ–ಅಜ್ಜಿ ಮಾತನಾಡುವುದನ್ನು ಕೇಳಿಯೇ ಎಳೆಯರು ಹೆಚ್ಚು ಕಲಿತಿರುತ್ತಾರೆ.

ಮಾತಿನ ನಡುವೆ ಮಕ್ಕಳು ಕೆಲವೊಮ್ಮೆ ಕೆಟ್ಟ ಶಬ್ದಗಳನ್ನು ಆಡುವುದಿದೆ. ಮೊಸರಿನಲ್ಲಿ ಕಲ್ಲು ಸಿಕ್ಕಂತಹ ಅನುಭವ ಮಕ್ಕಳಿಂದ ಕೆಟ್ಟ ಮಾತುಗಳನ್ನು ಕೇಳಿದಾಗ ಉಂಟಾಗುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ, ತಾವು ಆಡಿದ ಮಾತಿನ ಅರ್ಥವೇ ಮಕ್ಕಳಿಗೆ ತಿಳಿದಿರುವುದಿಲ್ಲ. ಹಾಗಾದರೆ, ಆ ಮಾತು ಅವರ ಬಾಯಿಂದ ಬಂದುದು ಹೇಗೆ? ಉತ್ತರ ಸರಳವಾದುದು. ಆ ಒಡಕು ಮಾತನ್ನು ಯಾವುದೋ ಸಂದರ್ಭದಲ್ಲಿ ಹಿರಿಯರೇ ಬಳಸಿರುತ್ತಾರೆ. ಅದು ಮಕ್ಕಳ ಮನಸ್ಸಿನಲ್ಲಿ ಕೂತು, ಯಾವುದೋ ಸಂದರ್ಭದಲ್ಲಿ ಅವರಿಗರಿವಿಲ್ಲದಂತೆಯೋ ಹೊರಬಂದಿರುತ್ತದೆ.

ಗಂಡ ಹೆಂಡತಿ ಎಂದಮೇಲೆ ಜಗಳ ಸಹಜವಷ್ಟೇ. ಮುನಿಸು ದಾಂಪತ್ಯದ ರುಚಿಯನ್ನು ಹೆಚ್ಚಿಸುವ ದ್ರವ್ಯ. ಆದರೆ, ಮುನಿಸಿನ ಭರದಲ್ಲಿ ಪರಸ್ಪರ ಬೈದಾಡಿಕೊಳ್ಳುವಾಗ ಎಚ್ಚರದಿಂದ ಇರುವುದು ಅಗತ್ಯ. ಗಂಡ ಹೆಂಡತಿ ಪರಸ್ಪರ ಬಳಸುವ ದೂಷಣೆಯ ಮಾತುಗಳು ಮಕ್ಕಳ ಕಿವಿಗೆ ಬೀಳುವುದು ಅಷ್ಟೇನೂ ಹಿತಕರ ಸಂಗತಿಯಲ್ಲ. ಆ ಮಾತುಗಳು ಮಕ್ಕಳ ಮನಸ್ಸಿನಲ್ಲಿ ಉಳಿದು ಮುಂದೊಮ್ಮೆ ಅವರೂ ಆ ಬೈಗುಳಗಳನ್ನು ತಾವೂ ಬಳಸಬಹುದು. ಇಲ್ಲವೇ, ಅಪ್ಪ ಅಮ್ಮನ ಬೈದಾಟ ಕಾದಾಟ ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರಲೂಬಹುದು. ಪೋಷಕರ ಮೇಲೆ ಋಣಾತ್ಮಕ ಧೋರಣೆ ಮೂಡಲು ಆ ಮಾತುಗಳು ಕಾರಣವಾಗಬಹುದು.

ಕೆಲವು ಕುಟುಂಬಗಳಲ್ಲಿ ಅಪ್ಪನ ಕಂಡರೆ ಮಕ್ಕಳಿಗೆ ವಿಪರೀತ ಭಯ. ಅಪ್ಪ ಪ್ರೀತಿಯಿಂದ ಕರೆದರೂ ಸನಿಹ ಹೋಗಲು ಅಳುಕುತ್ತಾರೆ. ಯಾಕೆ ಹಾಗಾಗುತ್ತದೆ? ಆತ ತನ್ನ ಹೆಂಡತಿಯ ಮೇಲೆ ಯಾವುದೋ ಸಂದರ್ಭದಲ್ಲಿ ಜೋರು ಮಾಡಿರಬಹುದು. ಪತ್ನಿಯನ್ನು ನಿಕೃಷ್ಟವಾಗಿ ನಡೆಸಿಕೊಂಡಿರಬಹುದು. ಆವೇಶದಲ್ಲಿ ಮಕ್ಕಳೊಂದಿಗೆ ಒರಟಾಗಿ ನಡೆದುಕೊಂಡಿರಲೂಬಹುದು. ಆ ಕಹಿ ಘಟನೆಗಳು ಮಕ್ಕಳ ಮನಸ್ಸಿನಲ್ಲಿ ಅಪ್ಪನ ಬಗ್ಗೆ ಕಟು ಭಾವನೆ ಮೂಡಿಸಿರಲಿಕ್ಕೆ ಸಾಧ್ಯವಿದೆ.

ಮಕ್ಕಳೆದುರು ಮಾತನಾಡುವಾಗ ಹಿರಿಯರು ಮೈಯೆಲ್ಲ ಕಣ್ಣಾಗಿರಬೇಕು. ಜಗಳ ಆಡುವ ಸಂದರ್ಭ ಬಂದಾಗ, ಆ ಕಿತ್ತಾಟವನ್ನು ಕೋಣೆಗೆ ಸೀಮಿತಗೊಳಿಸಬೇಕು. ಅಥವಾ ಕೂತು ಮಾತನಾಡಿ ಸಮಸ್ಯೆ ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಇದರಿಂದಾಗಿ, ಬಿಕ್ಕಟ್ಟಿನ ಸಂದರ್ಭಗವನ್ನು ಹೇಗೆ ನಿಭಾಯಿಸಬೇಕು ಎನ್ನುವ ಪಾಠವೂ ಮಕ್ಕಳಿಗೆ ಆಗುತ್ತದೆ.

ಅಪ್ಪ–ಅಮ್ಮ ಮಕ್ಕಳ ಬಳಿ ಪರಸ್ಪರ ದೂರಿಕೊಳ್ಳುವುದೂ ಸರಿಯಲ್ಲ. ಇಂಥ ದೂರುವಿಕೆಯಿಂದ ಮಕ್ಕಳಿಗೆ ಪೋಷಕರಲ್ಲಿ ಒಬ್ಬರು ಉದಾತ್ತವಾಗಿಯೂ ಮತ್ತೊಬ್ಬರು ಒರಟಾಗಿಯೂ ಕಾಣುವ ಸಾಧ್ಯತೆಯಿರುತ್ತದೆ. ಅಪ್ಪ–ಅಮ್ಮ ಇಬ್ಬರೂ ಮಕ್ಕಳ ದೃಷ್ಟಿಯಲ್ಲಿ ಸಮನಾಗಿರಬೇಕು. ಆ ಸಮಾನತೆಯನ್ನು ಪತಿ–ಪತ್ನಿ ತಮ್ಮ ನಡುವೆ ರೂಢಿಸಿಕೊಂಡಿದ್ದಾಗ ಮಕ್ಕಳಲ್ಲೂ ಅದು ಸಹಜವಾಗಿ ಮೂಡುತ್ತದೆ.

ಮನೆಯ ಪರಿಸರದಲ್ಲಿ ಒಡಕು ಮಾತುಗಳಿಗೆ ಅವಕಾಶ ಇಲ್ಲದಿರುವಾಗಲೂ ಕೆಲವೊಮ್ಮೆ ಮಕ್ಕಳ ಬಾಯಲ್ಲಿ ಬೈಗಳು ಬರುವುದುಂಟು. ಅದು ಸಹವಾಸದಿಂದ ದೊರೆತ ಮಾತು. ಸ್ನೇಹಿತರು ಆಡುವ ಮಾತುಗಳು ಮಕ್ಕಳನ್ನು ಪ್ರಭಾವಿಸುತ್ತವೆ. ಅಂಥ ಸಂದರ್ಭದಲ್ಲಿ, ಕೆಟ್ಟ ಮಾತನಾಡುವ ಸ್ನೇಹಿತನ ಸ್ನೇಹ ಕಡಿದುಕೊ ಎಂದು ಮಕ್ಕಳನ್ನು ಒತ್ತಾಯಿಸುವುದು ಸಲ್ಲದು. ಯಾವ ಮಾತು ಕೆಟ್ಟದು, ಯಾವುದು ಹಿತವಾದುದು ಎನ್ನುವುದನ್ನು ಮಕ್ಕಳಿಗೆ ತಿಳಿಸಿ ಹೇಳಬೇಕು. ಹಂಸಪಕ್ಷಿ ಹಾಲನ್ನಷ್ಟೇ ಹೀರಿಕೊಂಡು ನೀರನ್ನು ಪ್ರತ್ಯೇಕವಾಗಿ ಉಳಿಸುತ್ತದಂತೆ. ಆ 'ಹಂಸಕ್ಷೀರ ನ್ಯಾಯ'ದಂತೆ ಒಳಿತು ಕೆಡುಕುಗಳನ್ನು ಗುರ್ತಿಸುವ ಕಲೆಯನ್ನು ಮಕ್ಕಳಿಗೆ ಹೇಳಿಕೊಡಬೇಕು.

ಮನಸು ಮನಸುಗಳ ನಡುವೆ ಮಾತು ಮಧುರಭಾವ ಉಂಟುಮಾಡಬೇಕೇ ಹೊರತು ದ್ವೇಷಭಾವನೆಯಲ್ಲ. ಮಾತಿನ ಮಹತ್ವವನ್ನು ಮಕ್ಕಳಿಗೆ ಎಳೆತನದಲ್ಲಿಯೇ ಹೇಳಿಕೊಡಬೇಕು. ಅದರಿಂದ ಮಾತಿನ ಘನತೆಯೂ ಹೆಚ್ಚುತ್ತದೆ; ಮಕ್ಕಳ ವ್ಯಕ್ತಿತ್ವವೂ ಸೊಗಯಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in